



ಉಚ್ಚಾರಕ್ಕೂ ಸಂಬಂಧವಿಲ್ಲ. ಓದುವುದು ಯಶಸ್ವಿಯಾಗಬೇಕಾದರೆ, ನಮ್ಮ ಮಿದುಳಿಗೆ ಮೂರು ರೀತಿಯ ಸುಳಿವುಗಳು ರವಾನೆಯಾಗಬೇಕು.

- ★ ಅಕ್ಷರಗಳು/ಆಕಾರಗಳಿಂದ ದೊರೆಯುವ ಧ್ವನಿ ಸುಳಿವುಗಳು. (grapho phonemic clues)
- ★ ವಾಕ್ಯ ರಚನಾ ಸುಳಿವುಗಳು. (Syntactic clues)
- ★ ಶಬ್ದಾರ್ಥದ ಸುಳಿವುಗಳು (Semantic clues)

ಆದ್ದರಿಂದ ಚಿಕ್ಕ ಮಕ್ಕಳಿಗೆ ಓದುವುದನ್ನು ಕಲಿಸಬೇಕಾದರೆ ಕೇವಲ ಅಕ್ಷರಗಳು, ಸ್ಪೆಲ್ಲಿಂಗ್ ಉರು ಹೊಡೆಸಿದರೆ ಸಾಲದು. ಅಕ್ಷರಗಳ ಜೊತೆಜೊತೆಗೆ ಶಬ್ದಾರ್ಥಗಳನ್ನು ಕಲಿಸಬೇಕು. ಉದಾಹರಣೆಗೆ, ಕೆಲವು ಶಬ್ದಗಳನ್ನು ಓದುವಾಗ, ಮೊದಲ ಒಂದೆರಡು ಮತ್ತು ಕೊನೆಯ ಎರಡು ಅಕ್ಷರಗಳನ್ನು ಮಾತ್ರ ನಮ್ಮ ಮಿದುಳು ಗ್ರಹಿಸಿ, ಪೂರ್ಣ ಶಬ್ದವನ್ನು ಬುದ್ಧಿವಂತಿಕೆಯಿಂದ, ದೃಶ್ಯ ಜ್ಞಾನದಿಂದ ಊಹಿಸುತ್ತದೆ. ಈ ಊಹಿಸುವಿಕೆಯಿಂದ, ನಮ್ಮ ಮಿದುಳಿನ ಮೇಲಿನ 'overload' ಕಡಿಮೆಯಾಗುತ್ತದೆ.

ಈಗಿನ ಮಕ್ಕಳಿಗೆ ಮೂರು ಅಥವಾ –ನಾಲ್ಕನೇ ಕ್ಲಾಸಿಗೆ ಬಂದಾಗ ಶಾಲೆಯ ನಂತರ ಮನೆಯಲ್ಲಿ ವಿರಾಮದ ಸಮಯವೇ ಕಡಿಮೆ. ಇರುವ ಸ್ವಲ್ಪ ಸಮಯದಲ್ಲಿ ಹೋಂವರ್ಕ್ ಮಾಡುವುದರಲ್ಲಿ ನಿರತರಾಗಿರುತ್ತಾರೆ. ಶಾಲೆಯ ಓದೂ, ಒಂದು ಸಂತಸದ ಚಟುವಟಿಕೆಯಾಗಿ ಉಳಿದೇ ಇಲ್ಲ. ಈ ಕಾರಣಕ್ಕಾಗಿ, ಚಿಕ್ಕ ಮಕ್ಕಳಿಗೆ ಓದುವ ಹವ್ಯಾಸವನ್ನು ರೂಢಿಸಬೇಕು. ಅವರು ಅದನ್ನು ಆನಂದಿಸುವಂತೆ ಮಾಡುವುದು ಪೋಷಕರಾಗಿ ನಮ್ಮ ಕರ್ತವ್ಯ. ಈ ನಿಟ್ಟಿನಲ್ಲಿ ಕೆಲವು ಸಲಹೆಗಳು.

- ★ 1–2 ವರ್ಷದ ಮಕ್ಕಳಿಗೆ ಚಾರ್ಟ್‌ಗಳನ್ನು ತೋರಿಸುವುದಕ್ಕಿಂತ, ಪುಸ್ತಕಗಳಲ್ಲಿರುವ ಚಿತ್ರಗಳನ್ನು ತೋರಿಸಿ, ಹೇಳಿಕೊಡುವುದು ಉತ್ತಮ. ಕತೆಗಳನ್ನು ಹೇಳುವಾಗಲೂ ಕೂಡ, ಪುಸ್ತಕಗಳಲ್ಲಿ ಚಿತ್ರಗಳನ್ನು ತೋರಿಸಿ ಹೇಳಿದರೆ ಒಳ್ಳೆಯದು.
- ★ 3–4 ವರ್ಷದ ಮಕ್ಕಳಿಗೆ ಕತೆ ಪುಸ್ತಕಗಳಿಂದ ಕತೆಗಳನ್ನು ಓದಿ ಹೇಳುವ ಅಭ್ಯಾಸ ಮಾಡಬೇಕು. ವಾರದಲ್ಲಿ 3–4 ದಿನಗಳಾದರೂ ಅರ್ಧ ಗಂಟೆಯ ಕಾಲ ಇದಕ್ಕೆ ಸಮಯ ಮೀಸಲಿಟ್ಟರೆ ಒಳ್ಳೆಯದು. ಓದುವ ವ್ಯಕ್ತಿ ಆ ಕತೆಯನ್ನು ಮುಂಚೆಯೇ ಓದಿ ಅರ್ಥಮಾಡಿಕೊಂಡಿರುವುದು ಉತ್ತಮ. ಕೆಲವೊಮ್ಮೆ ತುಂಬಾ ಉದ್ದವಾಗಿರುವ ವಾಕ್ಯಗಳಿದ್ದರೆ, ಅದನ್ನು ಸಣ್ಣದಾಗಿ, ಸರಳವಾಗಿ ಮಾಡಬೇಕಾಗಬಹುದು. ಇನ್ನೂ ಕೆಲವು ಬಾರಿ ಕೆಲವು ಪರಿಚಿತ ಶಬ್ದಗಳಿದ್ದರೆ, ಮಕ್ಕಳಿಗೆ ಗೊತ್ತಿರುವ ವಿಷಯಗಳನ್ನು ಉದಾಹರಿಸಿ, ಅಲ್ಲೇ ವಿವರಿಸಬಹುದು.

ಈ ಸಮಯದಲ್ಲಿ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುವುದು, ಉತ್ತರ ನಿರೀಕ್ಷಿಸುವುದು ಖಂಡಿತ ಬೇಡ. ಮಕ್ಕಳಿಗೆ ಪರೀಕ್ಷೆ ಮಾದರಿಯ ಭಯ ಉಂಟಾಗುವುದಕ್ಕೆ ಅವಕಾಶ ಕೊಡಬಾರದು.

ಹಾಗೆಯೇ ಕೆಲವು ಕವನಗಳು/ರೈಮ್ಸ್ ಕೂಡ ಮಕ್ಕಳ ಓದುವ ಹವ್ಯಾಸ ಬೆಳೆಸುವಲ್ಲಿ ಸಹಾಯಕ. ಪುಟ್ಟ ಮಕ್ಕಳಿಗೆ ಪ್ರತಿ ಶಬ್ದ, ಶಬ್ದದ ಅರ್ಥ ತಿಳಿದಿರದಿದ್ದರೂ, ರೈಮ್ಸ್‌ಗಳು ಪೂರ್ಣ ಬಾಯಿಪಾಠ ಬರುತ್ತದೆ. ಆದ್ದರಿಂದ ಒಂದು ರೈಮ್ಸ್/ ಮಕ್ಕಳ ಕವನಗಳ ಪುಸ್ತಕ ಹಿಡಿದು, ಮಕ್ಕಳೊಂದಿಗೆ ಕುಳಿತು ಹೇಳಿಕೊಡುವುದೂ, ಹಾಡುವುದೂ ಮಾಡಬೇಕು.

ದೈನಂದಿನ ಪತ್ರಿಕೆಗಳಲ್ಲಿ ಕೂಡ ಕೆಲವು ವಿಷಯಗಳನ್ನು ತೋರಿಸಿ, ಹೇಳಿ, ಮಕ್ಕಳಲ್ಲಿ ಆಸಕ್ತಿ ಬೆಳೆಸಬೇಕು.

ಕಡೆಯದಾಗಿ, ನಮಗೆ, ಅಂದರೆ ಪೋಷಕರಿಗೆ ಓದುವ ಹವ್ಯಾಸವಿರಬೇಕು. ಮನೆಯಲ್ಲಿ ಒಂದು ಚಿಕ್ಕ ಜಾಗವಾದರೂ ಪುಸ್ತಕಗಳ ಲೈಬ್ರರಿಗೆ ಮೀಸಲಿಡಬೇಕು. ಪುಸ್ತಕಗಳನ್ನು/ದಿನಪತ್ರಿಕೆಗಳನ್ನು ನಾವು ಓದಿದರೆ, ಮಕ್ಕಳು ಅದನ್ನು ನೋಡಿ, ಸ್ವಲ್ಪ ಮಟ್ಟಿಗಾದರೂ ಉತ್ತೇಜಿತರಾಗುತ್ತಾರೆ.

(ಲೇಖಕಿ ಮನೋವೈದ್ಯೆ)